ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ, ದಿನಾಂಕ: 18ನೇ ಜುಲೈ, 2019

ಡಾ|| ನಂಜುಂಡಪ್ಪ ಸಮಿತಿಯ ವರದಿಯನ್ನು ಸಲ್ಲಿಸಿದ್ದು, ಈ ವರದಿಯ ಅನುಷ್ಠಾನದ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

302 (199) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಾ|| ನಂಜುಂಡಪ್ಪ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯು ವರದಿಯನ್ನು ಯಾವಾಗ ಸಲ್ಲಿಸಿತು ಮತ್ತು ಈ ವರದಿಯ ಪ್ರಕಾರ ಯಾವ ಕಾಲಮಿತಿಯಲ್ಲಿ ಸಮತೋಲನೆಯನ್ನು ತರಲು ಉದ್ದೇಶಿಸಲಾಗಿದೆ ;

(ಆ) ಈ ಸಮಿತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು ಹಿಂದುಳಿದ ಜಿಲ್ಲೆ ಹಾಗೂ ತಾಲ್ಲೂಕುಗಳೆಷ್ಟು ;

(ಇ) ಕಳೆದ 3 ವರ್ಷಗಳ ಅವಧಿಯಲ್ಲಿ ಈ ವರದಿಯಾನುಸಾರ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

(ಇಲಾಖಾವಾರು ಅಂಕಿ ಸಂಖ್ಯೆಯನ್ನು ಒದಗಿಸುವುದು) (ಈ) ಆಯವ್ಯಯದಲ್ಲಿ ಈ ವರದಿಯ ಅನುಷ್ಠಾನಕ್ಕಾಗಿ ಹಂಚಿಕೆಯಾದ ಹಣವನ್ನು ಸಂಪೂರ್ಣವಾಗಿ ವ್ಯಯಿಸಲಾಗಿದೆಯೇ ; (ವಿವರ ನೀಡುವುದು)

(ಉ) ಡಾ|| ನಂಜುಂಡಪ್ಪ ವರದಿಯ ಅನುಷ್ಠಾನವು ಯಾವ ಹಂತದಲ್ಲಿದೆ ಹಾಗೂ ಅದಕ್ಕೆ ಹೆಚ್ಚು ಚಾಲನೆಯನ್ನು ಕೊಡುವ ಹಿನ್ನೆಲೆಯಲ್ಲಿ ಸರ್ಕಾರ ಜರುಗಿಸಲಿರುವ ಕ್ರಮವೇನು ?